

# ಸಿತಾರಳ ಹುಟ್ಟುಹಬ್ಬ

■ ಶಾಲಿನಿ ನಾಯಕ್
ಕಲೆ: ಸಂತೋಷ್ ಸಸಿಹಿತ್ಲು

ಸಿತಾರ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಹುಡುಗಿ. ಒಂದು ಸಂಜೆ ಅವಳ ಚಿಕ್ಕಮ್ಮ ಮನೆಗೆ ಬಂದರು. 'ಪುಟ್ಟಿ ನಾಡಿದ್ದು ನಿನ್ನ ಹುಟ್ಟಿದ ಹಬ್ಬ ಅಲ್ಲವಾ? ಈ ಸಲ ನಿನ್ನ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಬೇಕು. ಅದಕ್ಕೆಂದೇ ನಾನು ಎರಡು ದಿನ ಮುಂಚಿತವಾಗಿ ಬಂದೆ ಗೊತ್ತಾ?' ಅಂದರು. ಸಿತಾರಳಿಗೆ ಬಹಳ ಸಂತೋಷವಾಯಿತು. 'ಚಿಕ್ಕಮ್ಮ ನೀನು ನನಗೋಸ್ಕರ ಏನು ಮಾಡ್ತಿಯಾ?' ಅಂತ ಅವಳು ಕೇಳಿದಾಗ 'ಈ ಸಲ ನಿನ್ನ ಅಪ್ಪ, ಅಮ್ಮ, ಚಿಕ್ಕಪ್ಪ, ನಾನು ಎಲ್ಲ ಸೇರಿ ಮನೆಯಲ್ಲೇ ತಿಂಡಿ ತಿನಿಸು ಮಾಡ್ತೀವಿ. ಪ್ಲಾಸ್ಟಿಕ್ ವಸ್ತುಗಳು ಏನನ್ನೂ ತಾರದೆ ಪರಿಸರಸ್ನೇಹಿ ಹುಟ್ಟುಹಬ್ಬ ಆಚರಿಸುತ್ತೇವೆ' ಎಂದು ಚಿಕ್ಕಮ್ಮ ನಕ್ಕರು.

ಸಿತಾರಳಿಗೆ ಶಾಲೆಯಲ್ಲಿ ಟೀಚರ್ ಪ್ಲಾಸ್ಟಿಕ್ ಬಳಸಬಾರದೆಂದು, ಅದನ್ನು ಎಲ್ಲೆಂದರಲ್ಲಿ ಬಿಸಾಡಬಾರದೆಂದು ಹೇಳಿದ್ದು ನೆನಪಾಯಿತು. ತನ್ನ ಚಿಕ್ಕಮ್ಮ ಹುಟ್ಟುಹಬ್ಬಕ್ಕೆ ಏನೆಲ್ಲ ಮಾಡಲಿದ್ದಾರೆ ಎಂಬ ಕುತೂಹಲ ಅವಳಲ್ಲಿ ಮನೆ ಮಾಡಿತು. ಚಿಕ್ಕಮ್ಮ ಬರುವಾಗ ಬಣ್ಣ ಬಣ್ಣದ ಕಾಗದಗಳನ್ನು ತಂದಿದ್ದರು. ಅವನ್ನು ಕತ್ತರಿಸಿ ಹೂವು ಮಾಡುವುದನ್ನು ಸಿತಾರಳಿಗೆ ಹೇಳಿಕೊಡುತ್ತಾ ತಾವು ಕೆಲವು ಹೂವುಗಳನ್ನು, ಬಳ್ಳಿಗಳನ್ನು, ತೋರಣಗಳನ್ನು ಮಾಡಿ ಇಟ್ಟರು. ಹುಟ್ಟುಹಬ್ಬದ ದಿನ ಅವನ್ನು ಬಾಗಿಲಿಗೆ, ಗೋಡೆಗೆ ಅಂಟಿಸಿ ಮನೆಯನ್ನು ಅಲಂಕರಿಸಿದರು.

ಸಿತಾರಳ ಹುಟ್ಟುಹಬ್ಬಕ್ಕೆ ಮನೆಯ ಸುತ್ತಮುತ್ತಲಿನ ಅವಳ ಗೆಳೆಯ–ಗೆಳತಿಯರನ್ನು ಆಹ್ವಾನಿಸಿದ್ದರು. ಮಕ್ಕಳೆಲ್ಲ ಬಂದ ಮೇಲೆ ಚದುರಂಗ, ಕೇರಂ, ಹಾವು–ಏಣಿ ಆಟವನ್ನು ಬೇಕಾದ ಹಾಗೆ ಆಟ ಆಡಲು ಬಿಟ್ಟರು. ಹಾಡು ಬರುವವರು ಹಾಡಲು, ನೃತ್ಯ ಕಲಿತವರು ನೃತ್ಯ ಮಾಡುವಂತೆ ಮಕ್ಕಳನ್ನು ಹುರಿದುಂಬಿಸಿದರು. ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಿ ಎಲ್ಲರಿಗೂ ಒಂದೊಂದು ಪೆನ್ಸಿಲ್ ಉಡುಗೊರೆಯಾಗಿ ಕೊಟ್ಟರು.

ಬಳಿಕ ಮಕ್ಕಳ ಕೈಯಿಂದ ಗಿಡ ನೆಡುವ ಕಾರ್ಯಕ್ರಮ ಪ್ರಾರಂಭವಾಯಿತು. ಸಿತಾರಳ ಚಿಕ್ಕಮ್ಮ ತಂದ ಸ್ನೇಕ್ ಪ್ಲಾಂಟ್, ಸ್ಪೈಡರ್ ಪ್ಲಾಂಟ್, ಮನಿಪ್ಲಾಂಟ್ ಮೊದಲಾದ ಒಳಾಂಗಣ ಸಸ್ಯಗಳನ್ನು ಚಿಕ್ಕ ಚಿಕ್ಕ ಕುಂಡಗಳಲ್ಲಿ ಮಕ್ಕಳ ಕೈಯಿಂದ ನೆಡಿಸಿದರು. ಈ ಗಿಡಗಳು ಮನೆಯ ಒಳಗಿನ ವಾತಾವರಣವನ್ನು ಶುದ್ಧಗೊಳಿಸುತ್ತವೆ ಎಂದು ಮಕ್ಕಳಿಗೆ ತಿಳಿಸಿ ಹೇಳಿದರು. ಸಿತಾರ ದೀಪವನ್ನು ಬೆಳಗಿಸಿದಳು. ಸಿತಾರಳ ಅಪ್ಪ ಮಾಡಿದ ಕೇಸರಿಬಾತ್, ಅಮ್ಮ ಚಿಕ್ಕಮ್ಮ ಮಾಡಿದ ಉಂಡೆ, ಚಕ್ಕುಲಿ, ಕೋಡುಬಳೆಯನ್ನು ಬಾಳೆ ಎಲೆಯಲ್ಲಿ ಹಾಕಿ ಮಕ್ಕಳಿಗೆ ತಿನ್ನಲು ಕೊಟ್ಟರು. ಸಿತಾರಳ ಚಿಕ್ಕಪ್ಪ ಹಣ್ಣಿನ ಜೂಸ್ ಮಾಡಿ ಮಕ್ಕಳಿಗೆ ಕುಡಿಯಲು ಕೊಟ್ಟರು. ಮಕ್ಕಳೆಲ್ಲ ಮನೆಗೆ ಹೊರಟು ನಿಂತಾಗ ಅವರಿಗೆಲ್ಲ ಮಕ್ಕಳ ಕಥೆ ಪುಸ್ತಕಗಳನ್ನು ಹಂಚಿ ಓದುವಂತೆ ಹೇಳಿದರು. ಜೊತೆಗೆ ಮಕ್ಕಳು ಚಿಕ್ಕ ಚಿಕ್ಕ ಕುಂಡಗಳಲ್ಲಿ ನೆಟ್ಟ ಗಿಡಗಳನ್ನು ಅವರಿಗೆ ಕೊಡುತ್ತಾ ಜೋಪಾನವಾಗಿ ಬೆಳೆಸುವಂತೆ ಸಿತಾರಳ ಅಮ್ಮ ಹೇಳಿದಳು. ಸಿತಾರ ಹುಟ್ಟುಹಬ್ಬದಿಂದ ಅವಳ ಸ್ನೇಹಿತರು ಬಹಳ ಸಂತಸಪಟ್ಟರು. ■

---

# ಮಳೆ

■ ಲಕ್ಷ್ಮಣ್ ಜಮದಾಡೆ
ಕಲೆ: ಸಂತೋಷ್ ಸಸಿಹಿತ್ಲು

ಗುಡು ಗುಡು ಮುತ್ಯಾ
ಬಂದಾನಪ್ಪಾ
ಫಳ ಫಳ ಮಿಂಚು
ಹೊಳಿಸ್ಯಾನಪ್ಪ

ಆಲಿ ಕಲ್ಲು
ಸುರಿಸ್ಯಾನಪ್ಪ
ಟಪ ಟಪ ಸದ್ದು
ಆಗೀತಪ್ಪ

ಹುಡುಗೂರ ಹುರುಪಲಿ
ತಿಂದಾರಪ್ಪ
ಕಳ್ಳೆ ಮಳ್ಳೆ ಕಪಾಟ ಮಳ್ಳೆ
ಆಡ್ಯಾರಪ್ಪ

ಧೋ ಧೋ ಮಳೆಯು
ಸುರಿದೀತಪ್ಪ
ತಪ್ಪನೆ ಭೂಮಿ
ತೊಯ್ದಿತಪ್ಪ

ರೈತನು ರೆಂಟೆ
ಹೊಡದಾನಪ್ಪ
ಭೂಮಿಗೆ ಬೀಜ
ಬಿತ್ಯಾನಪ್ಪ

ಬೀಜವು ಮೊಳಕೆ
ಒಡದೀತಪ್ಪ
ಭೂಮಿಯು ಹಸಿರು
ಆಗೀತಪ್ಪ

ರೈತನು ಬೆಳೆಯ
ಬೆಳೆದಾನಪ್ಪ
ಬೆಳೆಯನು ಕೊಯ್ಲು
ಮಾಡ್ಯಾನಪ್ಪ

ಭೂಮಿಗೆ ಕೈಯನು
ಮುಗಿದಾನಪ್ಪ
ಜಗಕೆ ಅನ್ನವ
ನೀಡ್ಯಾನಪ್ಪ ■

